ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 63/2022

ಸಿ.ಡಬ್ಲ್ಯೂ -1, ಪಿ.ಡಬ್ಲ್ಯೂ,1

ದಿಃ **11.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ತಿಮ್ಮಮ್ಮ |
| ಗಂಡ/ತಂದೆಯ ಹೆಸರು | ಚಂದ್ರಯ್ಯ |
| ವಯಸ್ಸು | 45 ವರ್ಷ |
| ಕೆಲಸ | ಗೃಹಿಣಿ |
| ವಾಸಸ್ಥಳ | ರಂಗಯ್ಯನ ಕೊಪ್ಪಲು |

**<u>ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿದ್ದಾರೆ. ಚಾಸಾ2 ರಿಂದ 5 ಗೊತ್ತು. ನನ್ನ ಮತ್ತು ಆರೋಪಿತರ ನಡುವೆ ಸಣ್ಣ ವಿಚಾರಕ್ಕೆ ಜಗಳವಾಗಿದ್ದು, ಈ ಬಗ್ಗೆ ನಾನು ಪೊಲೀಸರಿಗೆ ಮೌಖಿಕವಾಗಿ ತಿಳಿಸಿದ್ದೇನೆ. ಆ ಸಮಯದಲ್ಲಿ ಪೊಲೀಸರು ಈಗ ತೋರಿಸುತ್ತಿರುವ ಎರಡು ಬರವಣಿಗೆಯ ಮೇಲೆ ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದಿರುತ್ತಾರೆ. ಸಾಕ್ಷಿ ತನ್ನ ಸಹಿ ಇರುವ ಎರಡು ಬರವಣಿಗೆಯನ್ನು ನೋಡಿ ಗುರುತಿಸಿದ್ದು, ಅದು ದೂರು ಮತ್ತು ಆಗಿದ್ದು, ದೂರನ್ನು ನಿಪಿ-**1** ಎಂದು, ಅದರಲ್ಲಿರುವ ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನಿಪಿ**1**(ಎ) ಎಂದು, ಮಹಜರ್ ನ್ನು ನಿಪಿ**2** ಮತ್ತು ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನಿಪಿ**2**(ಎ) ಎಂದು ಗುರುತಿಸಲಾಯಿತು. ನಿಪಿ-**1** ಮತ್ತು **2** ರಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

<u>ಪಾಟೀ ಸವಾಲು ಮಾನ್ಯ ಎ.ಪಿ.ಪಿ ರವರಿಂದಃ</u>

ದಿಃ12.08.2021 ರಂದು ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ಆರೋಪಿತರು ನಮ್ಮ ಮನೆಯ ಮುಂಭಾಗ ಬಂದು ಬಾಯಿಗೆ ಬಂದಂತೆ ಬೈದರು ಎಂದರೆ ಸರಿಯಲ್ಲ. ನಾನು ಕೇಳಲು ಹೋದಾಗ 1 ನೇ ಆರೋಪಿ ಬಲಕೈ ಹಿಡಿದುಕೊಂಡು ಎಳೆದಾಡಿ ಹೊಡೆದನು ಎಂದರೆ ಸರಿಯಲ್ಲ. 3 ನೇ ಆರೋಪಿ ಅಲ್ಲೇ ಬಿದ್ದಿದ್ದ ದೊಣ್ಣೆಯಿಂದ ನನ್ನನ್ನು ಸಾಯಿಸುತ್ತೇನೆ ಎಂದು ಅವಾಚ್ಯಶಬ್ದಗಳಿಂದ ಬೈದು ನನ್ನ ಎಡಕೈ ಮುಂಗೈಗೆ

ಹೊಡೆದನು ಎಂದರೆ ಸರಿಯಲ್ಲ. 3ನೇ ಆರೋಪಿ ಅಲ್ಲೇ ನಿಂತುಕೊಂಡು ಕುಮ್ಮಕ್ಕು ನೀಡಿದನು ಎಂದರೆ ಸರಿಯಲ್ಲ. ದೊಣ್ಣೆಯಿಂದ ಹೊಡೆದಿದ್ದರಿಂದ ನನಗೆ ತೀವ್ರ ಸ್ವರೂಪದ ಗಾಯವುಂಟಾಗಿರುತ್ತದೆ ಎಂದರೆ ಸರಿಯಲ್ಲ, ಅಷ್ಟರಲ್ಲಿ ಚಾಸಾ4 ಮತ್ತು 5ರವರು ಬಂದು ಗಲಾಟೆ ಬಿಡಿಸಿದರು ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಈಗ ಮೇಲೆ ಓದಿ ಹೇಳಿದ ಹಾಗೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿ:13.08.2021ರಂದು ಸಂಜೆ 4.30 ರಿಂದ 5.30 ಗಂಟೆ ಸಮಯದಲ್ಲಿ ನಾನು ಸ್ಥಳವನ್ನು ತೋರಿಸಿದ್ದ ಮೇರೆಗೆ, ಚಾಸಾ6 ಮತ್ತು 7ರವರ ಸಮಕ್ಷಮ ನಿಪಿ2ರಂತೆ ಮಹಜರ್ ಕ್ರಮ ಜರುಗಿಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಒಂದು ದೊಣ್ಣೆ ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ.

ಆರೋಪಿತರು ಹಾಗೂ ನೀವು ರಾಜಿ ಆಗಿರುತ್ತೇವೆಂದರೆ ಸರಿ. ರಾಜಿಯಾಗಿರುವ ಕಾರಣದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು ಆರೋಪಿತರ ಪರ ವಕೀಲರಿಂದಃ**

ಇಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,

ಹುಣಸೂರು.